ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER :
ದಿನಾಂಕ : DATE : 03/08/2019

# ಕನಿಷ್ಠ ವೇತನ ವಿಧೇಯಕಕ್ಕೆ ಸಂಸತ್ ಅಸ್ತು

**ಕನಿಷ್ಠ ವೇತನ ಕಡ್ಡಾಯ । ಅಸಂಘಟಿತ ವಲಯಕ್ಕೆ ಪುಷ್ಟಿ**

## 50 ಕೋಟಿಗೂ ಹೆಚ್ಚು ಕೆಲಸಗಾರರಿಗೆ ಅನುಕೂಲ । ಪ್ರತಿಯೊಬ್ಬ ಕಾರ್ಮಿಕರಿಗೂ ಕನಿಷ್ಠ ವೇತನ ಕಡ್ಡಾಯ

■ **ಹೊಸದಿಲ್ಲಿ** ಪಿಟಿಐ

ಪ್ರತಿಯೊಬ್ಬ ಕಾರ್ಮಿಕನಿಗೂ ಕನಿಷ್ಠ ವೇತನ ನಿಗದಿಪಡಿಸುವ 'ವೇತನಸಂಹಿತೆ ವಿಧೇಯಕ-2019'ಕ್ಕೆ ಸಂಸತ್ತಿನಲ್ಲಿ ಶುಕ್ರವಾರ ಅನುಮೋದನೆ ದೊರೆತಿದೆ. ಉದ್ಯೋಗಿಗಳಿಗೆ ವೇತನ ವಿತರಣೆಯಲ್ಲಿ ವಿಳಂಬವಾಗುವುದೂ ಸೇರಿದಂತೆ ನಾನಾ ಸಮಸ್ಯೆಗಳನ್ನು ನಿವಾರಿಸಲು ವಿಧೇಯಕ ನೆರವಾಗಲಿದೆ.

ಕೇಂದ್ರ ಕಾರ್ಮಿಕ ಸಚಿವ ಸಂತೋಷ್ ಕುಮಾರ್ ಗಂಗ್ವಾರ್ ಸಂಸತ್ತಿನಲ್ಲಿ ಮಾತನಾಡಿ, ''ಈ ವಿಧೇಯಕದಿಂದ ದೇಶದ ಸುಮಾರು 50 ಕೋಟಿ ಕೆಲಸಗಾರರಿಗೆ ಅನುಕೂಲವಾಗಲಿದೆ,'' ಎಂದಿದ್ದಾರೆ. ''ಪ್ರತಿಯೊಬ್ಬ ಕೆಲಸಗಾರನೂ ಘನತೆಯಿಂದ ಬದುಕಲು, ಈ ಐತಿಹಾಸಿಕ ವಿಧೇಯಕವು ನೆರವಾಗಲಿದೆ,'' ಎಂದು ಸಚಿವರು ಹೇಳಿದ್ದಾರೆ. ರಾಜ್ಯಸಭೆಯಲ್ಲಿ 85 ಸದಸ್ಯರು ಪರವಾಗಿ, ಕೇವಲ 8 ಸದಸ್ಯರು ವಿರುದ್ಧವಾಗಿ ಮತ ಚಲಾಯಿಸಿದ್ದಾರೆ.

ಈ ವಿಧೇಯಕವು ಕಾರ್ಮಿಕರ ಹಿತಾಸಕ್ತಿಗಳಿಗೆ ತೊಡಕಾಗುತ್ತದೆ ಎಂದು ವಿರೋಧ ಪಕ್ಷಗಳು ದೂರಿದ್ದವು. ಭಾರತೀಯ ಮಜ್ದೂರ್ ಸಂಘವೂ ಈ ವಿಧೇಯಕವನ್ನು ವಿರೋಧಿಸಿತ್ತು.

ಕನಿಷ್ಠ ವೇತನ ಪಾವತಿ ಕಾಯ್ದೆ 1948, ವೇತನ ಪಾವತಿ ಕಾಯ್ದೆ 1936, ಬೋನಸ್ ಪಾವತಿ ಕಾಯ್ದೆ 1965 ಮತ್ತು ಸಮಾನ ವೇತನ ಕಾಯ್ದೆ 1976 – ಈ ನಾಲ್ಕು ಕಾರ್ಮಿಕ ಸಂಬಂಧಿ ಕಾನೂನುಗಳು ಈ ಹೊಸ ವಿಧೇಯಕದಲ್ಲಿ ಅಡಕ ಮಾಡಲಾಗಿದೆ. ನಾಲ್ಕೂ ಹಳೆಯ ಕಾಯ್ದೆಗಳ ಬದಲಿಗೆ ಹೊಸ ವಿಧೇಯಕವೊಂದೇ ಇನ್ನು ಮುಂದೆ ಇರಲಿದೆ.

ಹೊಸ ವಿಧೇಯಕವು 32 ಕೇಂದ್ರ ಕಾರ್ಮಿಕ ನಿಯಮಗಳನ್ನು ಸರಳೀಕರಣಗೊಳಿಸಿದ್ದು, ಉದ್ಯೋಗಿಗಳ ಆರ್ಥಿಕ ಸ್ಥಿತಿಗತಿ ಸುಧಾರಣೆಗೆ ಸೂಕ್ತವಾಗಿದೆ. 2017ರ ಆ.10ರಂದು ಈ ವಿಧೇಯಕವು ಲೋಕಸಭೆಯಲ್ಲಿ ಮಂಡನೆಯಾಗಿತ್ತು. 2018ರ ಡಿ.18ರಂದು ವಿಧೇಯಕದ ಬಗ್ಗೆ ಸ್ಥಾಯಿ ಸಮಿತಿ ತನ್ನ ವರದಿ ನೀಡಿತ್ತು.

**ಗೊಂದಲ ನಿವಾರಣೆ**

ಈಗಿನ ಕಾರ್ಮಿಕ ಕಾನೂನುಗಳಲ್ಲಿ ವೇತನದ ವ್ಯಾಖ್ಯಾನವನ್ನು 12 ಬಗೆಯಲ್ಲಿ ವ್ಯಾಖ್ಯಾನಿಸಲಾಗಿದ್ದು, ಕನಿಷ್ಠ ವೇತನ ಮತ್ತು ಇತರ ಪ್ರಯೋಜನಗಳನ್ನು ಜಾರಿಗೊಳಿಸುವುದು ಕಷ್ಟವಾಗಿತ್ತು. ಹೊಸ ವಿಧೇಯಕವು ವ್ಯಾಖ್ಯಾನವನ್ನು ಸರಳಗೊಳಿಸಿದೆ. ಹೀಗಾಗಿ ಕಾರ್ಮಿಕರಿಗೆ ಅನುಕೂಲವಾಗಲಿದೆ.



### ವಿಧೇಯಕದಿಂದ ಏನು ಲಾಭ?

- ತಿಂಗಳು, ವಾರ ಅಥವಾ ದಿನಗಳ ಆಧಾರದಲ್ಲಿ ಏನೇ ಇರಲಿ ವೇತನವನ್ನು ತಡ ಮಾಡುವಂತಿಲ್ಲ.
- ಕನಿಷ್ಠ ವೇತನವು ಪ್ರತಿಯೊಬ್ಬರಿಗೂ ಸಿಗುವಂತೆ ಮಾಡಲು ವಿಧೇಯಕದಲ್ಲಿ ಆದ್ಯತೆ.
- ವೇತನದಲ್ಲಿ ಪುರುಷ, ಮಹಿಳೆ, ಮಂಗಳಮುಖಿಯರು ಎಂಬ ಪಕ್ಷಪಾತ ಸಲ್ಲದು.
- ವೇತನದ ಸ್ತರಗಳು ಏನೇ ಇದ್ದರೂ, ಎಲ್ಲ ಉದ್ಯೋಗಿಗಳಿಗೂ ಸಕಾಲಕ್ಕೆ ವೇತನ ನೀಡಬೇಕು.

### ಕನಿಷ್ಠ ವೇತನ ನಿರ್ಧಾರ ರಾಜ್ಯಗಳ ವಿವೇಚನೆಗೆ

ಕನಿಷ್ಠ ವೇತನ ಸಿಗಬೇಕು ಎನ್ನುವುದು ಸರಕಾರದ ಉದ್ದೇಶ. ''ದೇಶದ ಎಲ್ಲ ಕಾರ್ಮಿಕರಿಗೂ ನ್ಯಾಯಬದ್ಧ ಕನಿಷ್ಠ ವೇತನ ಸಿಗಬೇಕು ಎನ್ನುವುದು ಸರಕಾರದ ಉದ್ದೇಶ. ಕೆಲಸಗಾರರಿಗೆ ಕನಿಷ್ಠ ವೇತನ ನಿಗದಿ ಆದಾಗ್ಯೂ, ಕನಿಷ್ಠ ವೇತನವನ್ನು ಕೇಂದ್ರ ಸರಕಾರವು ನಿಗದಿ ಮಾಡುವುದಿಲ್ಲ. ಕೆಲಸಗಾರರಿಗೆ ಕನಿಷ್ಠ ವೇತನ ನಿಗದಿ ಮಾಡುವ ರಾಜ್ಯಗಳ ಹಕ್ಕನ್ನು ಕೇಂದ್ರವು ಕಸಿಯುವುದಿಲ್ಲ,'' ಎಂದು ಕೇಂದ್ರ ಸಚಿವ ಸಂತೋಷ್ ಗಂಗ್ವಾರ್ ಸಂಸತ್ತಿಗೆ ಭರವಸೆ ನೀಡಿದ್ದಾರೆ. ಹೊಸ ವಿಧೇಯಕದ ಪ್ರಕಾರ, ಉದ್ಯೋಗಿಗಳು ಮತ್ತು ಉದ್ಯೋಗದಾತರ ಸಂಘಟನೆಗಳು ಮತ್ತು ರಾಜ್ಯ ಸರಕಾರದ ಪ್ರತಿನಿಧಿಗಳನ್ನು ಒಳಗೊಂಡ ತ್ರಿಪಕ್ಷೀಯ ಸಮಿತಿಯು ವೇತನವನ್ನು ನಿಗದಿ ಮಾಡುತ್ತದೆ. ''ಕನಿಷ್ಠ ವೇತನ ಎನ್ನುವುದು ಪ್ರತಿಯೊಬ್ಬ ಉದ್ಯೋಗಿಯ ಹಕ್ಕು'' ಎಂದು ಗಂಗ್ವಾರ್ ಹೇಳಿದ್ದಾರೆ.